ಮಾತನಾಡಿದ್ದಾರೆ. ಮತ್ತೆ ನಿಮ್ಮಲ್ಲಿ 10 ಜನ 1.5 ಗಂಟೆ ಸಮಯವನ್ನು ಒಬ್ಬೊಬ್ಬರು ತೆಗೆದುಕೊಂಡು ಮಾತನಾಡಿದ್ದೀರಿ. ಇಷ್ಟೊಂದು ಸಮಯವನ್ನು ತೆಗೆದುಕೊಂಡರೂ ಸಮಯ ಕೊಟ್ಟಿಲ್ಲವೆಂದು ಮಾತನಾಡಬೇಡಿ. ಆದ್ದರಿಂದ ಎಲ್ಲಾ ಸದಸ್ಯರು ಸಹಕಾರ ಮಾಡಿದರೆ ಸಭೆ ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಪುಟ್ಟಣ್ಣಯ್ಯನವರೆ, ತಾವು ದಯಮಾಡಿ ಚರ್ಚೆಯನ್ನು ಮುಂದುವರಿಸಿ ಆದಷ್ಟು ಬೇಗ ಮುಗಿಸಬೇಕು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಈಗ ಮಾತನಾಡುವುದಕ್ಕೆ ಮನಸ್ಸು ಇಲ್ಲ, ಆದ್ದರಿಂದ ನಾಳೆ ಬೆಳಿಗ್ಗೆ ಮಾತನಾಡುತ್ತೇನೆ. ಈಗ ಇಲ್ಲಿ ಹೇಗಾಗಿದೆ ಎಂದರೆ, ನಮ್ಮ ಊರಿನಲ್ಲಿ ಒಂದು ನಾಟಕವಾಯಿತು. ನಾಟಕ ನೋಡಲು ಬಂದವರೆಲ್ಲರೂ ಹೋಗಿ ಕೊನೆಗೆ 6 ಜನ ಮಾತ್ರ ಉಳಿದುಕೊಂಡಿದ್ದರು. ನಾಟಕ ಮುಗಿದ ಮೇಲೆ ನಾನು ಅವರಿಗೆ ನಮ್ಮ ನಾಟಕ ಚೆನ್ನಾಗಿತ್ತಾ ಎಂದು ಕೇಳಿದ್ದಕ್ಕೆ ಅವರು ಏನು ಹೇಳಿದರೆಂದರೆ, ನಾಟಕದ ಸೀನ್ಸ್‌ನವರಿಗೆ ನಮ್ಮ ಹಗ್ಗವನ್ನು ಕೊಟ್ಟಿದ್ದೆವು, ಅದನ್ನು ವಾಪಸ್ಸು ಪಡೆದುಕೊಂಡು ಹೋಗಲು ಇಲ್ಲಿ ಕುಳಿತುಕೊಂಡಿದ್ದೇವೆಂದು ಹೇಳಿದರು. ಹಾಗಾಗುತ್ತದೆ ನನ್ನ ಭಾಷಣ.

(ಸಭಾಧ್ಯಕ್ಷರು (ಶ್ರೀ ರಮೇಶ್‌ಕುಮಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

3. ಸಮಿತಿಯ ರಚನೆಯ ಪ್ರಸ್ತಾವ

ವಿಷಯ: ''ತುಮಕೂರು ಜಿಲ್ಲೆಯ ಶಿರಾ ಪಟ್ಟಣದ ಕೃಷಿ ಮಾರುಕಟ್ಟೆಯಲ್ಲಿ ಕಡಲೆಕಾಯಿ ಬೆಲೆ ಕುರಿತು ಪ್ರತಿಭಟನೆ ಹಾಗೂ ರೈತರು ಗೋಲಿಬಾರ್‌ನಿಂದ ಸಾವಿಗೀಡಾಗಿರುವ ಬಗ್ಗೆ ಹಾಗೂ ಹಲವಾರು ಜನರು ಗಾಯಗೊಂಡಿರುವವರ ಬಗ್ಗೆ ಪರಿಹಾರ ಸೂಚಿಸಲು ಜಂಟಿ ಸದನ ಸಮಿತಿಯ ಸದಸ್ಯರ ನೇಮಕ.''

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖಾ ಸಚಿವರು): ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆಯ ಶಿರಾ ಪಟ್ಟಣದಿಂದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ರೈತರು ಬೆಳೆದ ಕಡಲೆಕಾಯಿ ಬೆಲೆಯು ದಿಢೀರನೆ ಕುಸಿದಿದ್ದರಿಂದ ದಿನಾಂಕ: 28ನೇ ಅಕ್ಟೋಬರ್ 1998ರಂದು ರೈತ ಸಮುದಾಯವು ಪ್ರತಿಭಟನೆ ವ್ಯಕ್ತಪಡಿಸಿದಾಗ ಪೊಲೀಸರಿಂದ ರೈತರ ಮೇಲೆ ನಡೆದ ಗೋಲಿಬಾರ್‌ನಿಂದಾಗಿ ಸಾವುನೋವುಂಟಾಗಿರುವ ಬಗ್ಗೆ ಸದನದಲ್ಲಿ ಪ್ರಸ್ತಾವವಾಗಿ ಐದು ಜನರ ಸಾವಿಗೆ ಹಾಗೂ ಇತರೆ ಹಲವಾರು ಜನರು ಗಾಯಗೊಂಡಿರುವ ಸಂದರ್ಭದ ಬಗ್ಗೆ ವಿಚಾರಣೆಯನ್ನು ನಡೆಸಲು ಹಾಗೂ ಇಂತಹ

ಘಟನೆ ಇನ್ನು ಮುಂದೆ ಮರುಕಳಿಸದಂತೆ ಪರಿಹಾರೋಪಾಯವನ್ನು ಸೂಚಿಸಲು ಈ ವಿಧಾನಸಭೆಯ 15 ಮಾನ್ಯ ಸದಸ್ಯರು ಹಾಗೂ ವಿಧಾನಪರಿಷತ್ತಿನ 7 ಮಾನ್ಯ ಸದಸ್ಯರುಗಳಿರುವ ಜಂಟಿ ಸದನ ಸಮಿತಿಗೆ ಒಪ್ಪಿಸಬೇಕೆಂದು ಹಾಗೂ ಅದಕ್ಕಾಗಿ ವಿಧಾನಪರಿಷತ್ತಿನ ಒಪ್ಪಿಗೆಯನ್ನು ಪಡೆಯಬೇಕೆಂಬ ಪ್ರಸ್ತಾವನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀಯುತರುಗಳಾದ:

1) ಅಶ್ವತ್ಥ್‌ನಾರಾಯಣ ರೆಡ್ಡಿ

2) ಸಿ.ಎಸ್.ಪುಟ್ಟೇಗೌಡ

3) ಟಿ.ಎಂ.ಚಂದ್ರಶೇಖರಯ್ಯ

4) ಎ.ಆರ್.ಕೃಷ್ಣಮೂರ್ತಿ

5) ಕೆ.ಶ್ರೀನಿವಾಸಗೌಡ

6) ಕೆ.ಅಮರನಾಥ್‌ಶೆಟ್ಟಿ

7) ಜಿ.ವಿ.ಶ್ರೀರಾಮರೆಡ್ಡಿ

8) ವಾಟಾಳ ನಾಗರಾಜ್

9) ಕೆ.ಎಸ್.ಪುಟ್ಟಣಯ್ಯ

10) ಕಾಗೋಡುತಿಮ್ಮಪ್ಪ

11) ಡಿ.ಆರ್.ಪಾಟೀಲ್

12) ಬಿ.ಶಿವರಾಮು

13) ಎಸ್.ಸುರೇಶ್‌ಕುಮಾರ್

14) ಅರಗ ಜ್ಞಾನೇಂದ್ರ

15) ಚಂದ್ರಕಾಂತ್ ಬೆಲ್ಲದ್

(ಪ್ರಸ್ತಾವ ಮಂಡಿಸಲ್ಪಟ್ಟಿತು)

ಅಧ್ಯಕ್ಷರು: ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ, ''ತುಮಕೂರು ಜಿಲ್ಲೆಯ ಶಿರಾಪಟ್ಟಣದಿಂದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ರೈತರು ಬೆಳೆದ ಕಡಲೆಕಾಯಿ ಬೆಲೆಯು ದಿಢೀರನೆ ಕುಸಿದಿದ್ದುದರಿಂದ ದಿನಾಂಕ: 26ನೇ ಅಕ್ಟೋಬರ್ 1998ರಂದು ರೈತ ಸಮುದಾಯವು ಪ್ರತಿಭಟನೆ ವ್ಯಕ್ತಪಡಿಸಿದಾಗ ಪೊಲೀಸರಿಂದ ರೈತರ ಮೇಲೆ ನಡೆದ ಗೋಲಿಬಾರ್‌ನಿಂದಾಗಿ ಸಾವು ನೋವುಂಟಾಗಿರುವ ಬಗ್ಗೆ ಸದನದಲ್ಲಿ ಪ್ರಸ್ತಾವಾಗಿ ಐದು ಜನರ ಸಾವಿಗೆ ಹಾಗೂ ಇತರೆ ಹಲವಾರು ಜನರು ಗಾಯಗೊಂಡಿರುವ ಸಂದರ್ಭದ ಬಗ್ಗೆ ವಿಚಾರಣೆಯನ್ನು ನಡೆಸಲು ಹಾಗೂ ಇಂತಹ ಘಟನೆ ಇನ್ನು ಮುಂದೆ ಮರುಕಳಿಸದಂತೆ ಪರಿಹಾರೋಪಾಯವನ್ನು ಸೂಚಿಸಲು ಈ ವಿಧಾನಸಭೆಯ 15 ಮಾನ್ಯ ಸದಸ್ಯರು ಹಾಗೂ ವಿಧಾನಪರಿಷತ್ತಿನ 7 ಮಾನ್ಯ ಸದಸ್ಯರುಗಳಿರುವ ಜಂಟಿ ಸದನ ಸಮಿತಿಗೆ ಒಪ್ಪಿಸಬೇಕೆಂದು ಹಾಗೂ ಅದಕ್ಕಾಗಿ ವಿಧಾನಪರಿಷತ್ತಿನ ಒಪ್ಪಿಗೆಯನ್ನು ಪಡೆಯಬೇಕೆಂದು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀಯುತರುಗಳಾದ:

1) ಅಶ್ವತ್ಥ್‌ನಾರಾಯಣ ರೆಡ್ಡಿ

2) ಸಿ.ಎಸ್.ಪುಟ್ಟೇಗೌಡ

3) ಟಿ.ಎಂ.ಚಂದ್ರಶೇಖರಯ್ಯ

4) ಎ.ಆರ್.ಕೃಷ್ಣಮೂರ್ತಿ

5) ಕೆ.ಶ್ರೀನಿವಾಸಗೌಡ

6) ಕೆ.ಅಮರನಾಥ್‌ಶೆಟ್ಟಿ

7) ಜಿ.ವಿ.ಶ್ರೀರಾಮರೆಡ್ಡಿ

8) ವಾಟಾಳ ನಾಗರಾಜ್

9) ಕೆ.ಎಸ್.ಪುಟ್ಟಣಯ್ಯ

10) ಕಾಗೋಡುತಿಮ್ಮಪ್ಪ

11) ಡಿ.ಆರ್.ಪಾಟೀಲ್

12) ಬಿ.ಶಿವರಾಮು

13) ಎಸ್.ಸುರೇಶ್‌ಕುಮಾರ್

14) ಅರಗ ಜ್ಞಾನೇಂದ್ರ

15) ಚಂದ್ರಕಾಂತ್ ಬೆಲ್ಲದ್

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

4. ಚುಕ್ಕೆ ಗುರ್ತಿನ ಹಾಗೂ ಚುಕ್ಕೆ ಗುರ್ತಿಲ್ಲದ ಪ್ರಶ್ನೋತ್ತರಗಳ ಮಂಡನೆ

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖಾ ಸಚಿವರು): ದಿನಾಂಕ 6ನೇ ನವೆಂಬರ್ 1998ರಂದು ಪ್ರಶ್ನೋತ್ತರಗಳು ನಡೆಯದ ಕಾರಣ ಆದಿನ 37ನೇಯ ಪಟ್ಟಿಯ 15 ಚುಕ್ಕೆ ಗುರುತಿನ ಪ್ರಶ್ನೆಗಳ ಪೈಕಿ 12 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 37ನೇ ಪಟ್ಟಿಯ 124 ಪ್ರಶ್ನೆಗಳ ಪೈಕಿ 84 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದಿಡುತ್ತೇನೆ. ಈ ದಿವಸ 38ನೇ ಪಟ್ಟಿಯ 15 ಪ್ರಶ್ನೆಗಳಿಗೆ 14 ಪ್ರಶ್ನೆಗಳಿಗೆ ಉತ್ತರಗಳನ್ನು, ಲಿಖಿತ ಮೂಲಕ ಉತ್ತರಿಸುವ 38ನೆ ಪಟ್ಟಿಯ 84 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ದಿನಾಂಕ 6.11.98ರ ಚುಕ್ಕೆಗುರುತಿನ ಪ್ರಶ್ನೋತ್ತರಗಳು.

ಮೈಸೂರು ನಗರದ ನಾಯ್ಡು ನಗರದ ಬಸ್ ನಿಲ್ದಾಣ ನಿರ್ಮಾಣ.

534: (3845)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ನಾಯ್ಡು ನಗರ (ಗಜೇಂದ್ರ ನಗರ)ದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ಬಸ್ ನಿಲ್ದಾಣಕ್ಕೆ ಶಂಕು ಸ್ಥಾಪನೆ ನೆರೆವೇರಿಸಿದ್ದರೂ ಸಹ ಯಾವುದೇ ಪ್ರಗತಿ ಕಾಣದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಮೇಲ್ಕಂಡ ನಿಲ್ದಾಣದ ಬಗ್ಗೆ ಟೆಂಡರ್ ಕರೆಯಲಾಗಿದೆಯೇ; ಹಾಗಿದ್ದಲ್ಲಿ ಈ ಕಾಮಗಾರಿಯನ್ನು ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ; ಶಂಕುಸ್ಥಾಪನೆಯಾಗಿದ್ದರೂ